MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - TUESDAY 9-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## 3 ವಾರಗಳ ಗರಿಷ್ಠ ಮಟ್ಟದಿಂದ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಪೂರೈಕೆಯ ತೀವ್ರ ಇಳಿಕೆಯ ಹೊರತಾಗಿಯೂ ರಫ್ತು ಇಳಿಕೆಯ ಅಂದಾಜಿನಿಂದ ಮಲೇಶಿಯನ್ ಪಾಮೆಣ್ಣೆ ದರ 3 ವಾರಗಳ ಗರಿಷ್ಠ ಮಟ್ಟದಿಂದ ಟನ್‌ಗೆ 47 ರಿಂಗಿಟ್ಸ್ 1.25 ಶೇಕಡಾ ಇಳಿಕೆಯಾಗಿ 3715 ರಿಂಗಿಟ್ಸ್ ($ 837.66) ಆಗಿದೆ. (ಮಧ್ಯಾಹ್ನದ ವಿರಾಮದ ಅವಧಿಯಲ್ಲಿ)

## ಭಾರತ ಅತಿ ದೊಡ್ಡ ಜಾಗತಿಕ ಗೋಡಂಬಿ ಬಳಕೆದಾರ ದೇಶ

ಭಾರತ ಜಾಗತಿಕ ಅತಿದೊಡ್ಡ ಗೋಡಂಬಿ ಬಳಕೆದಾರ, ಸಂಸ್ಕರಣೆಗಾರ ದೇಶವೆನ್ನಲಾಗಿದೆ. ಒಟ್ಟು ಜಾಗತಿಕ ಉತ್ಪಾದನೆಯ ಅರ್ಧದಷ್ಟು ಭಾರತದಲ್ಲೇ ಸಂಸ್ಕರಣೆಯಾಗುತ್ತಿದೆಯೆನ್ನಲಾಗಿದೆ ಹಾಗೂ ಒಟ್ಟು ಜಾಗತಿಕ 40 ಶೇಕಡಾ ಗೋಡಂಬಿ ಭಾರತದಲ್ಲೇ ಬಳಕೆಯಾಗುತ್ತಿದೆಯೆನ್ನಲಾಗಿದೆ. ಹೆಚ್ಚಳವಾಗುತ್ತಿರುವ ದೇಶೀ ಬೇಡಿಕೆಯಿಂದ ಭಾರತದ ಗೋಡಂಬಿ ಉದ್ಯಮದ ಗಳಿಕೆ 2023–24 ರಲ್ಲಿ ರೂ.30000 ಕೋಟಿಗಳಿಗೆ ಏರಿಕೆಯಾಗಬಹುದೆಂದು CRISIL RTINGS ಅಂದಾಜಿಸಿದೆ. ಯು.ಎಸ್ 2ನೇ ಅತಿ ಹೆಚ್ಚು ಜಾಗತಿಕ ಗೋಡಂಬಿ ಬಳಕೆದಾರ ದೇಶವೆನ್ನಲಾಗಿದ್ದು, ಒಟ್ಟು ಜಾಗತಿಕ ಬಳಕೆಯ 10–15 ಶೇಕಡಾ ಬಳಕೆಮಾಡುತ್ತಿದೆಯೆನ್ನಲಾಗಿದೆ. ದರ ಹಿಂದಿನ ವರ್ಷದಿಂದ 5 ಶೇಕಡಾ ವೃಧ್ಧಿಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.

## ಅಕ್ಕಿ ರಫ್ತು ದರ ಹೆಚ್ಚಳ

ಏಶಿಯಾದ ದೇಶಗಳಾದ ಫಿಲಿಫೈನ್ಸ್, ಇಂಡೋನೇಶೀಯಾ ಹಾಗೂ ಮಲೇಶೀಯಾ ಮತ್ತಿತರ ದೇಶಗಳು ಸಂಭಾವ್ಯ ಪ್ರತಿಕೂಲ ಪರಿಸ್ಥಿತಿಯ ನಿಭಾವಣೆಗೆ ಅಧಿಕ ಅಕ್ಕಿ ಖರೀದಿಮಾಡಲುದ್ದೇಶಿಸಿರುವುದರಿಂದ ಅಕ್ಕಿಯ ರಫ್ತು ದರ ಹೆಚ್ಚಳವಾಗಿದೆಯೆನ್ನಲಾಗಿದೆ.